ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಸದಸ್ಯರು ನಿವೃತ್ತಿ ಹೊಂದಿದ ನೌಕರರಿಗೆ ನಿವೃತ್ತಿ ವೇತನ ಮತ್ತು ಅವರಿಗೆ ಬರಬೇಕಾದ ಬಾಕಿ ಬಂದಿಲ್ಲವೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸಂಸ್ಥೆಯಲ್ಲಿ spare parts, tyre, tube ಇಲ್ಲವೆಂದು ಹೇಳಿದ್ದಾರೆ. ಅದೆಲ್ಲದಕ್ಕೂ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಅವರು tax ಬಗ್ಗೆ ಮಾತನಾಡಿದ್ದಾರೆ. Tax ವಿಷಯ ಸರ್ಕಾರ ಪರಿಶೀಲನೆಯಲ್ಲಿರುವುದರಿಂದ ಒಂದು ಸಭೆ ಕರೆದು ನಿರ್ದಿಷ್ಟ ನಿರ್ಣಯ ತೆಗೆದುಕೋಳ್ಳಲಾಗುವುದು.

ಇ) ವಿಷಯ: ಪಶ್ಚಿಮ ಘಟ್ಟಗಳಿಂದ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರನ್ನು ಬಯಲುಸೀಮೆ ಪ್ರದೇಶಗಳಿಗೆ ಕುಡಿಯುವ ನೀರಿನ ಉಪಯೋಗಕ್ಕಾಗಿ ಡಾ: ಪರಮಶಿವಯ್ಯನವರ ವರದಿಯನ್ನಾಧರಿಸಿ N.R.S.A ಸಂಸ್ಥೆಗೆ ಸಮೀಕ್ಷೆ ನಡೆಯಲು ವಹಿಸಿದ್ದು ಈ ಕುರಿತಂತೆ ಇತ್ತೀಚಿನ ವರದಿ ಹಾಗೂ ಪ್ರಗತಿ ಬಗ್ಗೆ.

ಶ್ರೀ ವಿ ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಪಶ್ಚಿಮ ಘಟ್ಟಗಳಿಂದ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರನ್ನು ಬಯಲುಸೀಮೆ ಪ್ರದೇಶಗಳಿಗೆ ಕುಡಿಯುವ ನೀರಿನ ಉಪಯೋಗಕ್ಕಾಗಿ ಡಾ: ಪರಮಶಿವಯ್ಯನವರ ವರದಿಯನ್ನಾಧರಿಸಿ N.R.S.A ಸಂಸ್ಥೆಗೆ ಸಮೀಕ್ಷೆ ನಡೆಯಲು ವಹಿಸಿದ್ದು ಈ ಕುರಿತಂತೆ ಇತ್ತೀಚಿನ ವರದಿ ಹಾಗೂ ಪ್ರಗತಿ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯದಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ಶ್ರೀ ಜಿ.ಎಸ್. ಪರಮಶಿವಯ್ಯನವರು ರೂಪಿಸಿರುವ ಯೋಜನೆಯ ಸಂಬಂಧವಾಗಿ ವೈಮಾನಿಕ ತನಿಖೆ, ಸಮೀಕ್ಷೆ ಹಾಗೂ ವಿವರವಾದ ಯೋಜನಾ ವರದಿಯ ತಯಾರಿಕೆಯ ಕಾರ್ಯಕ್ಕಾಗಿ ಮೆ: ಎನ್.ಆರ್.ಎಸ್.ಸಿ. ಸಂಸ್ಥೆ, ಹೈದರಾಬಾದ್ ಇವರೊಂದಿಗೆ ರೂ.15,494 ಕೋಟಿಗಳ ಅಂದಾಜು ವೆಚ್ಚದ ಒಡಂಬಡಿಕೆಯನ್ನು ದಿನಾಂಕ: 12.09.2003

ರಂದು ಮಾಡಿಕೊಳ್ಳಲಾಗಿದೆ. ಈ ಹಣವನ್ನು ಸದರಿ ಸಂಸ್ಥೆಗೆ 6 ಹಂತಗಳಲ್ಲಿ ಅವರು ನಿರ್ವಹಿಸುವ ಕಾರ್ಯಕ್ರಮಕ್ಕನುಗುಣವಾಗಿ ಬಿಡುಗಡೆಗೊಳಿಸಲು ಒಡಂಬಡಿಕೆಯಲ್ಲಿ ನಮೂದಿಸಲಾಗಿದೆ. ಈವರೆಗೆ ಸದರಿ ಸಂಸ್ಥೆಗೆ ಒಟ್ಟು ರೂ. 643.79 ಲಕ್ಷಗಳನ್ನು ಪಾವತಿಸಲಾಗಿದೆ.

ಈ ಯೋಜನೆಯ ಮುಖಾಂತರ ನೇತ್ರಾವತಿ ಜಲನಯನ ಪ್ರದೇಶ, ಸೀತಾ ಜಲನಯನ ಪ್ರದೇಶ ಹಾಗೂ ಎಣ್ಣೆಹೊಳೆ ಜಲಾನಯನ ಪ್ರದೇಶ, ಕೊಡಗು ಜಲಾನಯನ ಪ್ರದೇಶ, ಭದ್ರಾ ಹಾಗೂ ತುಂಗಾ ಜಲಾನಯನ ಪ್ರದೇಶಗಳಿಂದ ನೀರನ್ನು ಹರಿಸಿ ರಾಜ್ಯದ ಒಟ್ಟು 15 ಜಿಲ್ಲೆಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ಉಪಯೋಗಿಸುವ ಪ್ರಸ್ತಾವನೆ ಇದೆ.

ಮೆ: ಎನ್.ಆರ್.ಎಸ್.ಸಿ. ಸಂಸ್ಥೆಯು ಈ ಯೋಜನೆಯ ಮಾಲಾ ಕಾಲುವೆಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿರುವ ಮಾಹಿತಿಗಳನ್ನು ಸಂಸ್ಕರಿಸಿ ಜುಲೈ 2010 ರಲ್ಲಿ ಸಲ್ಲಿಸುವುದಾಗಿ ತಿಳಿಸಿರುತ್ತದೆ. ಈಗಾಗಲೇ ಸಂಸ್ಕರಿಸಿದ ದಾಖಲೆಗಳನ್ನು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ನೀಡುವ ಮೊದಲ ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯದಿಂದ ತೀರುವಳಿ ಪಡೆಯುವುದಕ್ಕಾಗಿ ಸಲ್ಲಿಸಲಾಗಿದೆ ಎಂದೂ ಸಹ ತಿಳಿಸಿರುತ್ತದೆ. ಸಂಸ್ಕರಿಸಿದ ಮಾಹಿತಿಗಳು ಲಭ್ಯವಾದ ನಂತರ ಮಾಲಾ ಕಾಲುವೆಗೆ ಸೀಮಿತಗೊಂಡಂತೆ ವಿವರವಾದ ಯೋಜನಾ ವರದಿಯನ್ನು ಆಗಸ್ಟ್ 2011ರ ವೇಳೆಗೆ ಮೆ: ಎನ್.ಆರ್.ಎಸ್.ಸಿ. ಸಂಸ್ಥೆಯಿಂದ ಪಡಿಯಲು ಕಾರ್ಯಕ್ರಮ ರೂಪಿಸಲಾಗಿದೆ.

5.20 ಪಿ.ಎಂ.

ಶ್ರೀ ವಿ ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಶ್ರೀ ಪರಮಶಿವಯ್ಯನವರು ಕೊಟ್ಟಿರುವ ವರದಿಯನ್ನಾಧರಿಸಿ ಸಮೀಕ್ಷೆ ನಡೆಸಲು 2003 ನೇ ಸೆಪ್ಟೆಂಬರ್‌ನಲ್ಲಿ ಎನ್.ಆರ್.ಎಸ್.ಸಿ. ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಇದರಲ್ಲಿ ಆರು ಹಂತಗಳಲ್ಲಿ ಹಣ ಬಿಡುಗಡೆ ಮಾಡಬೇಕೆಂಬ ಕಂಡಿಷನ್ ಇದೆ. ದುರಾದೃಷ್ಟವಶಾತ್ ಇವತ್ತು 2010ನೇ ಜುಲೈ ತಿಂಗಳು ಬಂದರೂ ಇಲ್ಲಿಯವರೆವಿಗೂ ಅದರ ಅಂತಿಮ ವರದಿಯಾಗಲಿ, ಅಥವಾ ಮಧ್ಯಮ ಅವಧಿಯ ವರದಿಯನ್ನಾಗಲಿ, ಪಡೆದುಕೊಳ್ಳುವುದಕ್ಕೆ ನಮಗೆ ಆಗಲಿಲ್ಲ.

ಸುಮಾರು ಏಳು ವರ್ಷಗಳಾಗಿವೆ. ಬಹುಶ: ನಮ್ಮ ಬಯಲು ಸೀಮೆ ಪ್ರದೇಶದ ಜನ ವಿಷ ಕುಡಿದು ಬದುಕುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ. ಇವತ್ತು ಅಂತರ್ಜಲದ ಮಟ್ಟ ಸುಮಾರು 800 ದಿಂದ 1000 ಆಡಿಗಿಂತಲೂ ಆಳಕ್ಕೆ ಹೋಗಿದೆ. ಇಲ್ಲಿ ಸಿಗುವ ನೀರು ವಿಷಮಿಶ್ರಿತವಾಗಿರತಕ್ಕಂಥ ನೀರು. ಇದು ಲವಣಾಂಶಗಳಿಂದ ಕೂಡಿರುವ ನೀರು. ಆ ನೀರನ್ನು ಕುಡಿದು ಈಗಾಗಲೇ ನೂರಾರು ಜನರು ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಅಲ್ಲಿನ ಜನರಿಗೆ ದಂತಕ್ಷಯ ಇದರ ಜೊತೆಗೆ ಬೇರೆ ಬೇರೆ ರೀತಿಯಲ್ಲಿ ಅಡ್ಡಪರಿಣಾಮಗಳಿಗೆ ಒಳಪಡುತ್ತಿದ್ದರೆ. ಇಂಥ ಪರಿಸ್ಥಿತಿ ಇದ್ದರೂ ಸಹ ನಾವು ಅನೇಕ ವರ್ಷಗಳಿಂದ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಯಾರೋ ಅವರೇ ಸ್ವಂತ ಖರ್ಚಿನಿಂದ ಸ್ವಂತ ಶ್ರಮದಿಂದ ರಾಜ್ಯದಲ್ಲಿ ಲಭ್ಯವಿರುವ ನೀರನ್ನು ವೈಜ್ಞಾನಿಕವಾಗಿ ಸದ್ಬಳಕ್ಕೆ ಮಾಡಿಕೊಳ್ಳುವ ಅವಕಾಶವಿದೆಯೆಂದು ಒಂದು ವರದಿ ಕೊಟ್ಟಿದ್ದಾರೆ. ಕೊಟ್ಟಿರುವ ವರದಿಯ ಆಧಾರದ ಮೇಲೆ ಸಮೀಕ್ಷೆ ನಡೆಸಿ. ಬಯಲು ಸೀಮೆ ಪ್ರದೇಶ ಸುಮಾರು 74 ತಾಲ್ಲೂಕುಗಳಲ್ಲಿ ಆ ಲವಣಾಂಶಯುಕ್ತ ನೀರು ಕುಡಿದು ಜನ ಇವತ್ತೇನು ಸಾಯುತ್ತಿದ್ದಾರೆ. ಅನಿವಾರ್ಯವಾಗಿ ಬೇರೆ ನೀರು ಇಲ್ಲ. ಸಪ್ಲೇಸ್ ವಾಟರ್ ಇಲ್ಲವೇ ಇಲ್ಲ, ಯಾವುದೇ ಶಾಶ್ವತವಾದ ನದಿ ನೀರು ನಮ್ಮಲ್ಲಿ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಇದಕ್ಕೆ ಆದ್ಯತೆಯನ್ನು ಕೊಡಬೇಕಾಗಿರುವುದು ಬಹುಶ: ಸರ್ಕಾರದ ಜವಾಬ್ದಾರಿ. ನಾನು ಈ ಬಗ್ಗೆ ವಿವರವಾಗಿ ಚರ್ಚೆ ಮಾಡಬೇಕೆಂದು ಕಳೆದ ಅಧಿವೇಶನದಲ್ಲಿ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಿ ಎಂದು ನಾನು ನಿಮಗೆ ಮನವಿ ಮಾಡಿದ್ದೇ ತಾವು ಅವಕಾಶ ಮಾಡಿಕೊಟ್ಟಿದ್ದಿರಿ, ಆದರೆ, ಕಾರಣಾಂತರಗಳಿಂದ ಆಗ ಚರ್ಚೆಯಾಗಲಿಲ್ಲ. ನಾನು ತಮಲ್ಲಿ ವಿನಂತಿಸುತ್ತೇನೆ, ಆ ಭಾಗದ ಬಹಳ ಜನ ಶಾಸಕರು ಇವತ್ತು ಇಲ್ಲಿ ಇಲ್ಲ. ಹೀಗಾಗಿ ಅದಕ್ಕೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ಈ ಬಗ್ಗೆ ವಿವರವಾಗಿ ಚರ್ಚೆಯಾಗಬೇಕಾಗಿದೆ ಏಕೆಂದರೆ ಇದು ನಮ್ಮ ಬಯಲು ಸೀಮೆ ಪ್ರದೇಶದಲ್ಲಿರತಕ್ಕಂಥ ಜನರ ಜೀವನ್ಮರಣದ ಪ್ರಶ್ನೆ ದಯಮಾಡಿ ಇದಕ್ಕೆ ವಿಶೇಷವಾದ ಅವಕಾಶ ನಮಗೆ ಮಾಡಿಕೊಡಬೇಕು.

ಅಧ್ಯಕ್ಷರು: ಪ್ರತ್ಯೇಕವಾಗಿ ನೋಟಿಸ್ ಕೊಡಿ.

ಶ್ರೀ ವಿ ಮುನಿಯಪ್ಪ: ಆಯಿತು. ನಮ್ಮ ಮನವಿಯ ಮೇಲೆ ಮಾಡಿಕೊಡುವುದಕ್ಕೆ ತಮಗೆ ಅವಕಾಶ ಇದೆ. ತಮಗೆ discretionary power ಇದೆ. ತಾವು ಈಗಲೂ ಒಪ್ಪಿಕೊರಿಡು ಅರ್ಧಗಂಟೆಗೆ ಚರ್ಚೆಗೆ ಅವಕಾಶ ಕೊಡಬಹುದು.

ಅಧ್ಯಕ್ಷರು: ಇದನ್ನು ಕನ್‌ವರ್ಟ್ ಮಾಡುವುದಕ್ಕೆ ಬರುವುದಿಲ್ಲ. ನೀವು ಬೇರೆ ರೂಪದಲ್ಲಿ ಕೊಡಿ.

ಶ್ರೀ ವಿ ಮುನಿಯಪ್ಪ: ಹೋದಸಾರಿ ಕನ್‌ವರ್ಟ್ ಮಾಡಿದ್ದಿರಿ. ಮಾಡದೇ ಇದ್ದರೂ ಬೇರೆ ರೂಪದಲ್ಲಿ ಕೊಡೋಣ, ಇದರ ಬಗ್ಗೆ ವಿವರವಾಗಿ ಚರ್ಚೆಯಾಗಬೇಕು. ಕಳೆದ ಅಧಿವೇಶನದಲ್ಲಿ, ಜುಲೈ ತಿಂಗಳಿನಲ್ಲಿ ಪೂರ್ಣವಾದ ವರದಿಯನ್ನು ತರಿಸಿಕೊಡುತ್ತೇನೆ. ಈ ಮಧ್ಯೆ ಪೈಪ್‌ಲೈನ್ ಹಾಕುವುದಕ್ಕೆ ನಮ್ಮ ಇಲಾಖೆಯಿಂದ ಕ್ರಿಯಾ ಯೋಜನೆ ತಯಾರಿಸುತ್ತಿದ್ದೇವೆಂದು ತಾವು ಹೇಳಿದ್ದಿರಿ. ಅದು ಏನಾಗಿದೆ ಎಂಬ ಬಗ್ಗೆಯೂ ನನಗೆ ವಿವರಣೆ ಬೇಕು. ಸಮೀಕ್ಷೆಗೆ ಜುಲೈ ತಿಂಗಳಿನಲ್ಲಿ ಕೊಡುತ್ತೀರಿ ಎಂದು ಹೇಳುತ್ತಿದ್ದೀರಿ ಅದರ ಜೊತೆಯಲ್ಲಿ ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯದಿಂದ ಅನುಮತಿ ಪಡಿದುಕೊಂಡು ವರದಿ ಕೊಡುತ್ತೇವೆನ್ನುವ ಒಂದು ಸೂಚನೆ ಇದರಲ್ಲಿದೆ. ಇದಾದರೆ ಬಹುಶ: ಎಷ್ಟು ದಿವಸದಲ್ಲಿ ಆಗುತ್ತದೆ ಎಂಬ ಬಗ್ಗೆ ನಮಗೆ ವಿವರವಾಗಿ ಹೇಳಬೇಕಾಗುತ್ತದೆ. ಇದು ಬಹಳ ಮಹತ್ವವಾದ ವಿಚಾರ. ಇದಕ್ಕೆ ಆದ್ಯತೆ ಕೊಡಬೇಕಾಗಿದೆ ಎಂದು ನಾನು ನಿಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿಶೇಷವಾಗಿ ಮನವಿ ಮಾಡುತ್ತೇನೆ. ರಾಜ್ಯ ಸರ್ಕಾರ ಇದಕ್ಕೆ ಆದ್ಯತೆ ಕೊಡಬೇಕು ಏಕೆಂದರೆ, 74 ತಾಲ್ಲೂಕಿನ ಜನರ ಜೀವನ್ಮರಣದ ಪ್ರಶ್ನೆ ಇದರಲ್ಲಿ ಅಡಗಿದ. ನಾನು ಮತೋಮ್ಮೆ ಇದಕ್ಕೆ ಆದ್ಯತೆ ಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು: ಕ್ಲಾರಿಫಿಕೇಷನ್ ಮಾತ್ರ. ಒಬ್ಬರೇ ಕೇಳಿ.

ಶ್ರೀ ಕೆ ಎಂ ಶಿವಲಿಂಗೇಗೌಡ: ನಾವು ಆ ಭಾಗದ ಎಲ್ಲೆಯೊಳಗೆ ಬರುತ್ತೇವೆ.

ಅಧ್ಯಕ್ಷರು: ಇರಬಹುದು.

ಶ್ರೀ ಕೆ ಎಂ ಶಿವಲಿಂಗೇಗೌಡ: ನಿಜವಾಗಿಯೂ ಅಲ್ಲಿ ನಮಗೆ ತೊಂದರೆ ಇದೆ.

ಅಧ್ಯಕ್ಷರು: ಆ ಭಾಗದ ಕೊಡಗು ಜಿಲ್ಲೆಯ ಜನರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರೆ. ಅಲ್ಲಿ ಪ್ರತಿಭಟನೆಗಳಾಗುತ್ತಿವೆ.

ಶ್ರೀ ಟಿ ಬಿ ಜಯಚಂದ್ರ: ಅಧ್ಯಕ್ಷರು ನಮಗೆ ನೀರು ಕೊಡಿಸುತ್ತಾರೆಂದರೆ ನೀವು ಹೀಗೆ ಹೇಳಿದರೆ ಹೇಗೆ?

ಅಧ್ಯಕ್ಷರು: ನೀರು ಕೋಡಿಸುತ್ತೇನೆಂದು ಹೇಳಿದರೆ ಕೊಡಗು ಜಿಲ್ಲೆಯ ಜನತೆ ಪ್ರತಿಭಟನೆ ಮಾಡಿದರೆ ಅದಕ್ಕೆ ಸ್ಪಂದನೆಯಾಗಬೇಕಾಗುತ್ತೆದೆ. ನೀವು ಕೊಡಗು ಜಿಲ್ಲೆಯನ್ನು ಜ್ಞಾಪಿಸಿಕೊಳ್ಳುವುದು ನೀರಿಗೆ ಮಾತ್ರ. ಆ ಭಾವನೆ ಅಲ್ಲಿ ಇದೆ. ಈಗ ಅದರ ಬಗ್ಗೆ ಚರ್ಚೆ ಬೇಡ ಮಂತ್ರಿಗಳು ಉತ್ತರ ಕೊಡಿ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಸಚಿವರು ಉತ್ತರಿಸುವುದಕ್ಕೆ ಮುಂಚೆ, ಹೋದ ಬಾರಿ ನೀವು ಬಹಳ ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಉತ್ತರ ಕೊಟ್ಟಿದ್ದಿರಿ. ನಾನು ಕೂಡ ಬಹಳ ಮೆಚ್ಚುಗೆ ವ್ಯಕ್ತಪಡಿಸಿದ್ದೆ. ನೀರಾವರಿ ಸಚಿವರು ಬಹಳ ದಿಟ್ಟವಾದ ಒಂದು ಸಮಗ್ರವಾದ ಯೋಜನೆಯನ್ನು ರೂಪಿಸಿ ನಮ್ಮ ಬಯಲು ಸೀಮೆ ಪ್ರದೇಶಕ್ಕೆ ಕೊಡುತ್ತಾರೆಂದು ತಿಳಿದಿದ್ದೆವು. ಆದರೆ, ನೀವು ಇಲ್ಲಿ ಕೊಟ್ಟಿರುವ ಒಂದೇ ಒಂದು ಮಟದ ಉತ್ತರದಲ್ಲಿ ಏನೂ ಇಲ್ಲ. ಹಿಂದೆ ಏನು ಹೇಳಿದ್ದೀರೆಂದು ಜ್ಞಾಪಿಸಿಕೊಂಡು ಮುಂದೆ ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂದು ಹೇಳುವುದು ಒಳ್ಳೆಯದು.

ಅಧ್ಯಕ್ಷರು: ಇದು ಗಮನ ಸೆಳೆಯುವ ಸೂಚನೆ ಹೀಗಾದರೆ ಹೇಗೆ?

ಶ್ರೀ ಕೆ ಎಂ ಶಿವಲಿಂಗೇಗೌಡ: ಅಲ್ಲಿ ಇದು ಕನಸಾಗಿ ಉಳಿದುಕೊಂಡಿದೆ. ನಮ್ಮ ಪ್ರಾಂತ್ಯದ ಜನ ಏನು ತಿಳಿದುಕೊಂಡಿದ್ದಾರೆಂದರೆ.

ಅಧ್ಯಕ್ಷರು: ಆಯಿತು ಬಿಡಿ, ಅವರು ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೇಳುತ್ತಾರಂತೆ ಆಗ ಬೇಕಾದರೆ ಚರ್ಚೆ ಮಾಡಿ.

ಶ್ರೀ ಕೆ ಎಂ ಶಿವಲಿಂಗೇಗೌಡ: ಚರ್ಚೆಯಲ್ಲ ಸ್ವಾಮಿ, ಒಂದು ನಿಮಿಷದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ನೀವು ಈ ಭಾಗದಲ್ಲಿ ಅಧಿಕಾರಕ್ಕೆ ಬರಬೇಕಾದಂಥ ಸಂದರ್ಭದಲ್ಲಿ ಘೋಷಣೆ .ಮಾಡಿದ್ದೀರಿ. ನಾವು

ಗ್ಯಾರಂಟಿಯಾಗಿ ಸಮುದ್ರ ಸೇರುವ ನೀರನ್ನು ಮೇಲಕ್ಕೆತ್ತಿ ಕರೆಕೆರೆಗಳಿಗೆ ನೀರನ್ನು ಕೊಡುತ್ತೇವೆಂದು ಸ್ಪಷ್ಟವಾದ ಭರವಸೆಯನ್ನು ಆ ಭಾಗದ 174 ತಾಲ್ಲೂಕುಗಳ ಜನತೆಗೆ ನೀವು ನೀಡಿದೀರಿ. ಈಗ ಜಿ.ಎಸ್.ಪರಮಶಿವಯ್ಯನವರು ಏನು ಹೇಳುತ್ತಿದ್ದಾರೆಂದರೆ, ಮೊನ್ನೆ ಯಾವುದೋ ಒಂದು ಸಭೆಯಲ್ಲಿ ಸಧ್ಯ ನಾವು ಸರ್ವೆ ಮಾಡಿರುವ ದುಡ್ಡು ಕೊಟ್ಟುಬಿಟ್ಟರೆ ಸಾಕು ಮುಕ್ತಿ ಕಾಣುತ್ತೇವೆ ದಯಮಾಡಿ ಆ ದುಡ್ಡು ಕೊಡಿಸುವ ವ್ಯವಸ್ಥೆ ಮಾಡಿ ಎಂದು ಅವರು ಅಂಗಲಾಚಿ ಬೇಡುವ ಪರಿಸ್ಥಿತಿ ಬಂದಿದೆ. ದಯಮಾಡಿ ಯಾವುದೋ ಒಂದು ದೃಷ್ಟಿಗೋಸ್ಕರ ಇಂಥ ಯೋಜನೆಗಳನ್ನು ಸರ್ವೆ ಮಾಡುವುದಕ್ಕೆ ಪ್ರಯತ್ನಿಸಿ. ಯಾರೋ ಮಾಡಿದರೂ ನಿಲ್ಲಿಸಿದರೋ ಹೋದರು ಎನ್ನುವುದು ಬೇಡ. ನಿಜವಾಗಲೂ ನೀವು ಏನಾದರೂ ಅಂತರ್ಜಲದ ಮಟ್ಟವನ್ನು ಜಾಸ್ತಿ ಮಾಡುವ ಕಾಳಜಿ ಇಟ್ಟುಕೊಂಡು ಪ್ರಮಾಣಿಕ ಪ್ರಯತ್ನ ಮಾಡದೇ ಹೋದರೆ ಬಹುಶ: ತೊಂದರೆಯಾಗುತ್ತದೆ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು.

ಅಧ್ಯಕ್ಷರು: ಇದು ಗಮನ ಸೆಳೆಯುವ ಸೂಚನೆ, ಸಾಕು ಬಿಡಿ. ನೀವು ಉತ್ತರ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಉತ್ತರ ಹೇಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಇದೊಂದು ಅತ್ಯಂತ ಜ್ವಲಂತ ಸಮಸ್ಯೆ ಮತ್ತು ಅತ್ಯಂತ ಮಹತ್ವದ ವಿಚಾರವನ್ನು ಎಲ್ಲಾ ಹಿರಿಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಬಯಲು ಸೀಮೆಯ ಪ್ರದೇಶದಲ್ಲಿ ವಿಶೇಷವಾಗಿ ಎತ್ತರದ ಪ್ರದೇಶವೆಂದು ನಾವೇನು ಕರೆಯುತ್ತೇವೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರಿನ ಕೆಲವು ಭಾಗಗಳು, ಚಿತ್ರದುರ್ಗ.

ಶ್ರೀ ಕೆ ಎಂ ಶಿವಲಿಂಗೇಗೌಡ: ನಮ್ಮ ಭಾಗವು ಸೇರುತ್ತದೆ.

ಅಧ್ಯಕ್ಷರು: ಅರಿಸಿಕೇರಿಯನ್ನು ಸೇರಿಸಿಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ನಿಮಗೆ ಒಂದು ಯೋಜನೆ ಮಾಡಿದ್ದೇನೆ ಬಿಡಿ ಸ್ವಾಮಿ. ಈ ಭಾಗದಲ್ಲಿ ತನ್ನದೇ ಅದಂಥ

ಲ.ಪ್ರ.ಇ-24

ನೀರಿನ ಸಂಪನ್ಮೂಲ ಒಂದು ಕಾಲದಲ್ಲಿತ್ತು. ಈ ಒಂದು ಪ್ರದೇಶದಲ್ಲಿ ಮಳೆ ಬಿದ್ದಂಥ ರನ್ ಆಫ್ ಎಂದೇನು ಕರೆಯುತ್ತೇವೆ, ಅದು ಕಡಿಮೆಯಾಗಿ ದೊಡ್ಡ ದೊಡ್ಡ ಕೆರೆಗಳು ಏನಿದ್ದವು ಅವು ಇವತ್ತು ಬತ್ತಿ ಹೋಗಿವೆ. ಆ ಕಾರಣದಿಂದ ಅಂತರ್ಜಲ ಕೆಳಗಡೆ ಹೋಗಿದೆ. ಕಳೆದ ಹಲವಾರು ವರ್ಷಗಳಿಂದ over exploitation of ground water ಮಾಡಿದ್ದರಿಂದ ಇವತ್ತು 1000 ಅಡಿ ಕೆಳಗಡೆ ಹೋಗುವ ಪರಿಸ್ಥಿತಿ ಬಂದಿದೆ. ನಾವು ಯಾವಾಗ 200,300 ಅಡಿ ಕೆಳಗಡೆ ಹೋಗುತ್ತೇವೆಯೋ ಸಾಮಾನ್ಯವಾಗಿ ಆ ನೀರು ಕುಡಿಯುವುದಕ್ಕೆ ಲಾಯಿಕ್ಕಿರುವುದಿಲ್ಲ. 50 ಮೀಟರ್ ಕೆಳಗಡೆ ಹೋದ ಮೇಲೆ ಆ ನೀರನ್ನು ಪರೀಕ್ಷೆ ಮಾಡಲೇಬೇಕು. ಅದಕ್ಕಿಂತ ಕೆಳಗಡೆ ಹೋದರೆ ಅದು ಖನಿಜ ಮಿಶ್ರಿತ ವಿಷ ಮಿಶ್ರಿತ ಆಗುತ್ತದೆ. ಅದರ ಪರಿಣಾಮವಾಗಿ ಇವತ್ತು fluoride, arsenic, ಇವೆಲ್ಲಾ ಆಗಿ ಮಕ್ಕಳು ಅಂಗವಿಕಲರಾಗುತ್ತಾರೆ. ವಯಸ್ಸಾದವರಿಗೆ ಕೈ ಕಾಲುಗಳಿಗೆ ನೋವು ಬರುತ್ತದೆ. ಇವೆಲ್ಲಾ ಬಹಳ ಸತ್ಯವಾಗಿವೆ. ಇದೊಂದು ಮಾನವೀಯ ಸಮಸ್ಯೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ನಾವು ಪ್ರಾಂತೀಯವಾಗಿ ಬೇರೆ ಬೇರೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದ ಪ್ರಮುಖ ಭಾಗವಾದ ಬಹಲು ಸೀಮೆ ಪ್ರದೇಶದಲ್ಲಿರುವ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ಪರಮಶಿವಯ್ಯನವರು ಬಹಳ ಕಷ್ಟಪಟ್ಟು ವೈಯಕ್ತಿಕವಾಗಿ ಒಂದು ತಂಡವನ್ನಾಗಿ ಮಾಡಿಕೊಂಡು ಏನೊಂದು ವರದಿ ಕೊಟ್ಟಿದ್ದಾರೆ, ಆ ವರದಿಯಂತೆ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರಬೇಕಾದರೆ ವೈಜ್ಞಾನಿಕವಾಗಿ ಸಮೀಕ್ಷೆ ಆಗಬೇಕು ಎನ್ನುವ ಕಾರಣಕ್ಕಾಗಿ ಎನ್.ಅರ್.ಎಸ್.ಸಿ.ಗೆ ಅಂದಿನ ಸರ್ಕಾರ ಕೊಟ್ಟಿತ್ತು. ಅತ್ಯಂತ ಸಂತೋಷದಿಂದ ಹೇಳಲಿಕ್ಕೆ ಇಚ್ಚಿಸುತ್ತೇನೆ. ಈಗ ಅದಕ್ಕೆ ಒಂದು ಅಂತಿಮ ಸ್ವರೂಪ ಬಂದಿದೆ. ಒಂದು ಹಂತದಲ್ಲಿ ಎನ್.ಆರ್.ಎಸ್.ಸಿ. ಮಾಡುವುದಕ್ಕೆ ತಯಾರಿರಲಿಲ್ಲ. ಆಗ ನಮ್ಮ ಇಂಜಿನಿಯರ್ ಅಲ್ಲಿ ಹೋಗಿ ಕುಳಿತುಕೊಂಡು ಸತತವಾಗಿ ಪ್ರಯತ್ನ ಮಾಡಿ ಅವರ ಮನವೊಲಿಸಿ ದುಡ್ಡನ್ನು ಕೊಟ್ಟು ಅವರಿಗೆ ಬೇಕಾಗಿರುವಂಥ ಮಾಹಿತಿಯನ್ನು ಒದಿಗಿಸಿದ್ದರಿಂದ ಇವತ್ತು ಅವರು air brown laser terrain

mapping (ALTM) ಎಂದು ಇರುತ್ತದೆ, ಇದನ್ನು ಮೊದಲು ಮಾಡಬೇಕಾಗುತ್ತದೆ.

ಅದರ ಮುಖಾಂತರ contour map ರೆಡಿಯಾಗಬೇಕು. ಇದನ್ನು ಅವರು ಈಗಾಗಲೇ ರೆಡಿ ಮಾಡಿದ್ದಾರೆ. ನೀರು ಇವತ್ತಿನ ದಿವಸ ಬಹಳ ಮುಖ್ಯವಾದದಾಗಿದೆ. ದೂರದ ಎತ್ತರದ ಘಟ್ಟ ಪ್ರದೇಶಗಳಲ್ಲಿ ಇದನ್ನು ಬೇಸಿಕ್ ಆಗಿ ಮಾಡತಕ್ಕಂಥದ್ದು ಅವಶ್ಯಕತೆ ಇರುವುದರಿಂದ ಇದನ್ನು ಮಾಡಿದ್ದಾರೆ. ಆದರೆ, ಇದು ಸೂಕ್ಷ್ಮ ವಿಚಾರವಾಗಿರುವುದರಿಂದ ಎನ್.ಆರ್.ಎಸ್.ಸಿ. ಸಂಸ್ಥೆಯವರು ಸರ್ವೆ ಮಾಡಿ ಇತರೇ ಇಲಾಖೆಗಳಿಗೆ ಮತ್ತು ಸರ್ಕಾರಕ್ಕೆ ಕೊಡಬೇಕಾದರೆ, security reasons ಗೋಸ್ಕರ ಅದಕ್ಕೆ ಡಿಫೆನ್ಸ್ ಇಲಾಖೆಯ ಅನುಮತಿ ಬೇಕಾಗುತ್ತದೆ. ಈ ಒಂದು ಹಿನ್ನಲೆಯಲ್ಲಿ ಅವರು ಡಿಫೆನ್ಸ್ ಕಳುಹಿಸಿಕೊಟ್ಟಿದ್ದಾರೆ. ನಾವೂ ಕೂಡ ಡಿಫೆನ್ಸ್ ಇಲಾಖೆಯ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದೇವೆ. ಆದಷ್ಟು ಬೇಗನೆ ಅದನ್ನು ಪಡೆದುಕೊಳ್ಳುತ್ತೇವೆ. ಸೂಕ್ಷ್ಮವಾಗಿ ಒಂದು ವಿಚಾರ ಹೇಳುವುದಾದರೆ, ಸರ್ವೆ ಮಾಡಿದಂಥ ಎಲ್ಲಾ ಹಂತದಲ್ಲಿ ನಮ್ಮ ಇಂಜಿನಿಯರ್‌ಗಳು ಅವರ ಜೊತೆಯಲ್ಲಿದ್ದರಿಂದ ಪ್ರಮುಖ ವಿಚಾರಗಳನ್ನು ನಾವು ತಿಳಿದುಕೊಂಡಿದ್ದೇವೆಂದು ಸೂಕ್ಷ್ಮವಾಗಿ ಡಿಫೆನ್ಸ್ ವಿಚಾರದಲ್ಲಿ ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಎನ್.ಆರ್.ಎಸ್.ಸಿ. ರವರು ನಮ್ಮ ಭಾರತ ಸರ್ಕಾರದ ಸಂಸ್ಥೆಯಾದ EPIL ರವರಿಗೆ DPR ಮಾಡುವುದಕ್ಕೆ sub contract ಅನ್ನು ಕೊಟ್ಟಿದ್ದಾರೆ. ಈ ಕೆಲಸ ಮಾಡಲು ಒಂದು ವರ್ಷ ಬೇಕೆಂದು ಅವರು ಕೇಳುತ್ತಿದ್ದಾರೆ ಆದರೆ, ಇದಕ್ಕೆ ನಾನು ಒಪ್ಪಿಕೊಂಡಿಲ್ಲ EPIL ರವರಿಗೆ ಒಂದು ವರ್ಷ ಬೇಕಾಗಿಲ್ಲ. ಆದ್ದರಿಂದ ನೀವು ಬೇಗನೆ ಮಾಡಬೇಕೆಂದು ಹೇಳಿದ್ದೇನೆ EPIL ರವರಿಗೆ ನಾವು ಕಾಯುತ್ತಾ ಕುಳಿತುಕೊಂಡಿಲ್ಲವೆಂದು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೇಪಡುತ್ತೇನೆ. ನಮ್ಮ ಹತ್ತಿರ ಇರತಕ್ಕಂಥ ಪ್ರಮುಖ ಮಾಹಿತಿಗಳ ಜೊತೆಗೆ ನಾವು ನಮ್ಮ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ನಮ್ಮ WRDO ಇಂಜಿನಿಯರ್‌ಗಳು ಈಗಾಗಲೇ garland canal and service

canal ಗೆ ಸಂಬಂಧಪಟ್ಟಂತೆ ಸಂಪೂರ್ಣವಾದಂಥ ಡಿಸೈನ್ ಮತ್ತು ಸೆಕ್ಷನ್ ವಿಂಗ್‌ಗೆ ಸಂಬಂಧಪಟ್ಟಂತೆ ಈ ಒಂದು contour ಮ್ಯಾಪ್‌ನಿಂದ ಮಾಹಿತಿ ತೆಗೆದುಕೊಂಡು ಇದರ ಜೊತೆಗೆ ಎಲ್ಲೆಲ್ಲಿ ಯಾವ್ಯಾವ ನಾಲೆಗಳು ಮತ್ತು ಹಳ್ಳಗಳು ಸೇರುತ್ತದೆ ಎಂಬ ಎಲ್ಲಾ ವಿಚಾರಗಳನ್ನು ಪಡೆದುಕೊಂಡು ಈಗಾಗಲೇ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಹೇಳಿದ್ದೇನೆ. EPIL ರವರಿಗೆ ಕಾಯದೆ ಆದಷ್ಟು ಬೇಗನೆ ಈ ಕೆಲಸವನ್ನು ನಾವು ಮಾಡಿ ಮುಗಿಸುತ್ತೇವೆಂದು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಈ ಭಾಗದ ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಬಗೆಹರಿಸುವಂಥ ಸಂದರ್ಭದಲ್ಲಿ ಪರಿಸರದ ಸಮತೋಲನೆಯನ್ನು ನಾವು ನೋಡ ಬೇಕಾಗುತ್ತದೆ. ಪಶ್ಚಿಮ ಘಟ್ಟಪ್ರದೇಶ ಒಂದು ಸೂಕ್ಷ್ಮವಾದ ಪ್ರದೇಶವಾಗಿದೆ. ಈ ಒಂದು ಹಿನ್ನಲೆಯಲ್ಲಿ ಬೇರೆ ಬೇರೆ ಕಡೆಯಿಂದ ಏನು ನೀರನ್ನು ಟ್ಯಾಪ್ ಮಾಡಬಹುದೆಂಬುದರ ಬಗ್ಗೆ Central Water Commission ಮತ್ತು ಹಿಂದಿನ ಸರ್ವೆಗಳಲ್ಲಿ ಏನು ಹೇಳಿದ್ದಾರೆಂಬ ಬಗ್ಗೆ ಅವೆಲ್ಲವನ್ನು ಅಭ್ಯಾಸ ಮಾಡಿ ಪರಿಸರಕ್ಕೆ ತೊಂದರೆಯಾಗದಂತೆ ಪರಮಶಿವಯ್ಯರವರ ವರದಿ ಪ್ರಕಾರ ಸುಮಾರು 180 ಅಥವಾ 200 ಟಿಎಂಸಿ ಲಭ್ಯವಾಗುತ್ತವೆಂದು ಹೇಳುತ್ತಾರೆ. ಆದರೆ, ನಿಖರವಾಗಿ ಎಷ್ಟು ನೀರು ಲಭ್ಯವಾಗುತ್ತದೆಂಬುದು ಈ ಸರ್ವೆಯಿಂದ ಗೊತ್ತಾಗುತ್ತದೆ. ಆ ಒಂದು garland canal design, storage and distribution ಇವೆಲ್ಲವನ್ನು ಮಾಡುವುದಕ್ಕೆ ಸ್ವಲ್ಪ ಸಮಯ ಬೇಕಾಗಬಹುದು. ಈ ಒಂದು ಹಿನ್ನಲೆಯಲ್ಲಿ ಮತ್ತು ಈಗಾಗಲೇ ಹೇಳಿದ ಪ್ರಕಾರ ಅದನ್ನು ತುರ್ತಾಗಿ ಮಾಡಬೇಕೆಂದು ಇದ್ದೇವೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ ನೀರನ್ನು ಬಯಲುಸೀಮೆಗೆ ತರುವಾಗ ಆಗುವಂಥ ಎಲ್ಲಾ ಸಮಸ್ಯೆ ಮತ್ತು ಆಕ್ಷೇಪಗಳೆಲ್ಲವನ್ನು ಸ್ಪಡಿ ಮಾಡಿ feasibility report ಅನ್ನು ಮಾಡಬೇಕೆಂದು ನಾನು ಕೇಳಿಕೊಂಡಿದ್ದೆ. ಪಶ್ಚಿಮ ಘಟ್ಟಕ್ಕೆ ತೊಂದರೆ ಆಗದ ರೀತಿಯಲ್ಲಿ ಮತ್ತು ಪಶ್ಚಿಮ ಘಟ್ಟದ ಬಾರ್ಡರ್‌ನಲ್ಲಿ ಅಂದರೆ ಪಶ್ಚಿಮ ಘಟಕ್ಕೆ ಒಳಕ್ಕೆ ಹೋಗದೆ ಪಶ್ಚಿಮ ಘಟ್ಟದ ಬಾರ್ಡರ್‌ನಲ್ಲಿರುವ water resource ಅನ್ನು ಸರ್ವೆ ಮಾಡಿ ಎಂದು ನನ್ನ ಇಲಾಖೆಗೆ ಸೂಚನೆ

ಕೊಟ್ಟ ಹಿನ್ನಲೆಯಿಂದ ಇವತ್ತು ಪಶ್ಚಿಮ ಘಟ್ಟದ ಬಾರ್ಡರ್‌ನಲ್ಲಿರುವ ಎತ್ತಿನಹೊಳೆ ಮತ್ತು ಅಕ್ಕಪಕ್ಕದಲ್ಲಿರುವಂಥ ಎರಡು ಮೂರು ಬೇಸಿನ್‌ಗಳನ್ನು ಸರ್ವೆ ಮಾಡಿ ಸುಮಾರು ನಾಲ್ಕೈದು ತಿಂಗಳು ಅಲ್ಲಿಂದ ನಮಗೆ ಸುಮಾರು 10.83 ಟಿ.ಎಂ.ಸಿ. ನೀರು ಲಭ್ಯವಾಗುತ್ತದೆ. ಈ ನೀರನ್ನು ನಾವು ಚಿಕ್ಕಬಳ್ಳಾಪುರ, ತುಮಕೂರಿನ ಕೆಲವು ಭಾಗ, ಕೋಲಾರದ ಕೆಲವು ಭಾಗ ಮತ್ತು ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಕುಡಿಯುವ ನೀರಿಗೋಸ್ಕರ ಮತ್ತು ಅಂತರ್ಜಲವನ್ನು ಹೆಚ್ಚಿಸುವುದಕ್ಕೋಸ್ಕರ ಕೆರೆಗಳನ್ನು ತುಂಬಿಸುವುದಕ್ಕೆ ಒಂದು ವರದಿಯನ್ನು ನಾವು ಸಿದ್ದಮಾಡಿದ್ದೇವೆ. ಇಲ್ಲಿ ಹತ್ತಾರು ವಿಚಾರಗಳು ಇವೆ. ಮೊದಲನೆಯದಾಗಿ ಹೇಳುವುದಾದರೆ, ನಾವು ತರುವಂಥ ನೀರು ಅಂದರೆ, ಕಾವೇರಿ ಬೇಸಿನ್ ನಿಂದ ನೀರನ್ನು ತಂದರೆ ಅದರ legal implication ಏನಾಗುತ್ತದೆಂದು ಮತ್ತು ಸುಪ್ರೀಂ ಕೋರ್ಟ್‌ನಲ್ಲಿರುವ ಕೇಸ್ ಮೇಲೆ ಏನು ಪರಿಣಾಮ ಬೀರುತ್ತದೆಂಬ ಬಗ್ಗೆ ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾವು Western flowing rivers ನಿಂದ ಪಾಲಾರ್ ಮತ್ತು ಪನ್ನಾರ್ ಪ್ರದೇಶಕ್ಕೆ ತೆಗೆದುಕೊಂಡು ಹೋದರೆ ಯಾವ ತರಹದ ತೊಂದರೆ ಇರುವುದಿಲ್ಲ. ಈ ಎಲ್ಲಾ ವಿಚಾರಗಳನ್ನು ಗಮನಿಸಿ ಒಂದು feasibility report ಮತ್ತು ಅದಕ್ಕೆ ಹೊಂದಿಕೊಳ್ಳುವಂಥ ಪ್ರಾಜೆಕ್ಟ್ ರಿಪೋರ್ಟ್ ಅನ್ನು ನಮ್ಮ ಕೈಸೇರಿದೆ. ಸುಮಾರು 10.83 ಟಿ.ಎಂ.ಸಿ. ನೀರನ್ನು ಈ ಭಾಗದ ಕುಡಿಯುವ ನೀರಿಗೋಸ್ಕರ ತರುವುದಕ್ಕಾಗಿ ಎರಡು ಮಾರ್ಗಗಳಿವೆ. ಮೊದಲನೆಯದು ಪೈಪ್‌ಲೈನ್ ಮುಖಾಂತರ ತರವಂಥದ್ದು ಇದೆ. ಏಕೆಂದರೆ, close conduct pipe line ನಲ್ಲಿ ತಂದರೆ ಆಕ್ಷೇಪಗಳು ಕಡಿಮೆ ಇರುತ್ತದೆ. ಇಲ್ಲದಿದ್ದರೆ ಟೆನಲ್ ಮುಖಾಂತರ ನೀರನ್ನು ತರಬೇಕಾಗುತ್ತದೆ ಎರಡು ಮಾರ್ಗಗಳ ಬಗ್ಗೆ ಕೂಡ ಪೂರ್ಣವಾಗಿ ಅಭ್ಯಾಸ ಮಾಡುವುದಕ್ಕೆ ಹೇಳಿದ್ದೇನೆ. ಏಕೆಂದರೆ, ಯಾವುದೇ ಜನಾಂಗಕ್ಕೆ ಎಲ್ಲಿಯೂ ಕೂಡ ತೊಂದರೆಯಾಗದ ರೀತಿಯಲ್ಲಿ ಕುಡಿಯುವ ನೀರನ್ನು ತರಬೇಕಾಗಿದೆ. ಇಲ್ಲಿ ಜಿಲ್ಲಾ ಮತ್ತು ಪ್ರದೇಶಗಳ ಸಂಘರ್ಷ ಆಗದಂತೆ ತರಬೇಕೆಂಬ ಸದುದ್ದೇಶ ನಮ್ಮ ಸರ್ಕಾರದು ಆಗಿದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಪಟ್ಟಂಥ ರಿಪೋರ್ಟ್

ಕೂಡ ಸಿದ್ದವಾಗಿ ನನ್ನ ಕೈ ಸೇರಿದೆ. ಅದನ್ನು TAC ಮುಂದೆ ನಾಳೆ ಅಥವಾ ನಾಡಿದ್ದು ಕಳುಹಿಸಿಕೊಡುತ್ತೇನೆ. ಅವರು ಅದನ್ನು ಪರಿಶೀಲನೆ ಮಾಡುತ್ತಾರೆ. ಮತ್ತೆ ಅದನ್ನು ಲೀಗಲ್ ಸೆಲ್‌ಗೂ ಸಹ ಕಳುಹಿಸಿಕೊಡುತ್ತೇವೆ. ಆದಷ್ಟು ಬೇಗ ಒಂದು ತೀರ್ಮಾನ ಮಾಡಿ ಈ ಭಾಗದ ಜನರಿಗೆ ಕುಡಿಯುವ ನೀರನ್ನು ಕೊಡುವುದರ ಬಗ್ಗೆ ಒಳ್ಳೆಯ ಸುದ್ದಿಯನ್ನು ಕೊಡುತ್ತೇವೆ. ಮತ್ತೆ ಇದರೆ ಬಗ್ಗೆ ನಾನು ಸಂಪೂರ್ಣವಾಗಿ ಎಲ್ಲ ರೀತಿಯ ಪ್ರಯತ್ನದ ಫಲಶೃತಿ ಬರುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಅಲ್ಲಿಯ ಸಮಸ್ಯೆ ಮತ್ತು ಅಲ್ಲಿನ ಜನರು ಕಷ್ಟ ಪಡುತ್ತಿರುವುದನ್ನು ನಾನು ನೋಡಿದ್ದೇನೆ. ನಾನು ನೋಡಿಯೂ ಕೂಡ ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ಈ ಕಡೆ ಪರಿಸರಕ್ಕೆ ಹಾನಿಯಾಗದಂತೆ ನಮ್ಮ water resource ಕೂಡ ವ್ಯರ್ಥ ಆಗದಂತೆ ಎಷ್ಟೇ ಖರ್ಚು ಅಥವಾ ಏನೇ ಬರಲಿ ಈ ಭಾಗದ ಜನತೆಗೆ ನೀರು ಒದಗಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. ಈಗಾಗಲೇ ಅದಕ್ಕೆ ಕಾರ್ಯವನ್ನು ರೂಪಿಸಿದ್ದೇವೆ. ಈಗ ಅದಕ್ಕೆ ಅಂತಿಮ ಫಲ ಕೊಡುವಂಥ ಸಮಯ ಬಂದಿದೆ. ನಿಮ್ಮೆಲ್ಲರ ಜೊತೆಯಲ್ಲಿ ಅದನ್ನು ನಾನು ಹಂಚಿಕೊಳ್ಳುತ್ತೇನೆ. ಇದಕ್ಕೆ ನಿಮ್ಮ ಸಹಕಾರ ಮತ್ತು ಎಲ್ಲಾ ಜನರ ಕೂಡ ಬಯಸುತ್ತೇನೆ. ಇದನ್ನು ಬಹಳ ಪಾರದರ್ಶಕವಾಗಿ ಮಾಡಬೇಕೆಂಬ ತೀರ್ಮಾನ ಕೂಡ ಮಾಡಿದ್ದೇನೆ. ಏಕೆಂದರೆ, ಇದು ಶಾಶ್ವತವಾಗಿ ಇರುವಂಥ ಒಂದು ಯೋಜನೆ. ಮುಂದೆ ಎಲ್ಲಾ ಕಾಲಕ್ಕೂ ಕೂಡ ಇದರಿಂದ ಜನರಿಗೆ ಉಪಯೋಗವಾಗಬೇಕು. ಘಟ್ಟ ಪ್ರದೇಸದ ಜನರ ವಿಶ್ವಾಸವನ್ನು ಸಹ ನಾವು ಪಡೆದುಕೊಂಡು ಈ ಒಂದು ಕಾರ್ಯಕ್ರಮವನ್ನು ನಾವು ರೂಪಿಸುತ್ತೇವೆ.

ಅಧ್ಯಕ್ಷರು: ಕೊಡಗು ಜಿಲ್ಲೆಯನ್ನು ಬಿಟ್ಟುಬಿಡಿ. ಏಕೆಂದರೆ, ಇದಕ್ಕೆ ಅಲ್ಲಿನ ಜನರು ವಿರೋಧ ಮಾಡುತ್ತಿದ್ದಾರೆ.

ಶ್ರೀ ಟಿ ಬಿ ಜಯಚಂದ್ರ: ಈಗ ಕೊಡಗು ಜಿಲ್ಲೆಯನ್ನು ಬಿಡುವ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು: ಕೊಡಗು ಜಿಲ್ಲೆಯನ್ನು ಬಿಡದಿದ್ದರೆ ಅಲ್ಲಿ ಜನರು ಪ್ರತಿಭಟನೆ ಮಾಡುತ್ತಾರೆ. ಇದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಜಯಚಂದ್ರರವರೆ, ನಿಮಗಿಂತ ಮಾನ್ಯ ಸಭಾಧ್ಯಕ್ಷರಿಗೆ convince ಮಾಡಬೇಕಾಗಿದೆ. ಆದ್ದರಿಂದ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ಕೊಡಗು ಜಿಲ್ಲೆಯವರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ drop it.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರಲ್ಲಿರುವಂಥ ಆತಂಕವನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೊಡಗು ಜಿಲ್ಲೆ ನೈಸರ್ಗಿಕ ಸಂಪತ್ತು ಭರಿತವಾದಂಥ ಜಿಲ್ಲೆಯಾಗಿದೆ. ಮತ್ತೆ ಅತೀ ಹೆಚ್ಚು ಮಳೆಯಾಗುವಂಥ ಜಿಲ್ಲೆಯಾಗಿದೆ. ಮತ್ತೆ ಕೊಡಗು ಜಿಲ್ಲೆಯಿಂದ ಇವತ್ತು ನಿಜವಾಗಿಯೂ ನಮಗೆ ಬಹಳ ದೊಡ್ಡ ಕಾಣಿಕೆ ಎಂದರೆ ಕಾವೇರಿ ಜಲಾಯನ ಪ್ರದೇಶ ಎಂದು ಹೇಳಬಹದು. ಈ ಒಂದು ಹಿನ್ನಲೆಯಲ್ಲಿ ಕೊಡಗು ಜಿಲ್ಲೆಗೆ ಮತ್ತು ಅಲ್ಲಿರುವ ಜನರಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಇಚ್ಛೈಪಡುತ್ತೇನೆ. ಇಷ್ಟು ವರ್ಷಗಳಿಂದ ಅತ್ಯಂತ ಸಹಕಾರ ಮನೋಭಾನೆ ಇರುವುದರಿಂದ ಇವತ್ತು ದಕ್ಷಿಣ ಕರ್ನಾಟಕ ಸಂಪೂರ್ಣವಾಗಿ ನೀರಾವರಿ ಆಗುವುದಕ್ಕೆ ಒಂದು ದೊಡ್ಡ ಕೊಡುಗೆ ಇದೆ. ಇದರಲ್ಲಿ ಕೊಡಗೂ ಜಿಲ್ಲೆಯ ಕೊಡುಗೆ ದೊಡ್ಡದಿದೆ. ಆದರೆ, ಅಲ್ಲಿ ಬಿದ್ದಂಥ ಮಳೆ ನೈಸರ್ಗಿಕವಾಗಿ ಹರಿದು ಬರುತ್ತದೆ. ಈ ನೀರನ್ನು ಅಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲಿರುವ contours ಎಲ್ಲಾ ನೈಸರ್ಗಿಕವಾಗಿ ಬರುತ್ತದೆ. ಆದ್ದರಿಂದ, ಕೊಡಗು ಜಿಲ್ಲೆಯ ಯಾವುದೇ ರೀತಿಯ ನೈಸರ್ಗಿಕ ಸಮತೋಲನವನ್ನು ಕೆಡಿಸದೆ ಮತ್ತು ಅಲ್ಲಿನ ನೀರಿಗೆ ತೊಂದರೆಯಾಗದಂತೆ ಹಾಗೂ ಅಲ್ಲಿನ ಜಲವೃಕ್ಷಕ್ಕೆ ತೊಂದರೆಯಾಗದಂತೆ ಮತ್ತು ನಿಮ್ಮಲ್ಲಿರುವಂತ ಯಾವುದೇ ಒಂದು ವಿಷಯಕ್ಕೆ ತೊಂದರೆಯಾಗದಂತೆ ಮತ್ತು ಹನಿ ಹನಿ ನೀರಿಗೂ ಪರಿತಪ್ಪಿಸುವಂಥ ಈ ಭಾಗದ ಜನರಿಗೆ ನಾವು ನೀರು ಕೊಡಬೇಕಾಗಿದೆ. ನಾನು ಕೊಡಗು ಎಂದು ಹೇಳುತ್ತಿಲ್ಲ. Central Water

Commission ರವರು identify ಮಾಡಿದ್ದಾರೆ. ಆ feasibility ಯನ್ನು ಸ್ಟಡಿ ಮಾಡಿ ಈ ಭಾಗದ ಜನರಿಗೆ ನೀರನ್ನು ಕೊಡುವುದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತೇವೆ. ನೀರನ್ನು ಕೊಡುತ್ತೇವೆಂದು ನನಗೆ ವಿಶ್ವಾಸ ಇದೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಮಾನ್ಯ ಎಂ.ಡಿ.ಕೃಷ್ಣಪ್ಪನವರದು.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಸಣ್ಣ ಕ್ಲಾರಿಫಿಕೇಶನ್ ಇದೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿ ಕ್ಲಾರಿಫಿಕೇಶನ್ ಇರುವುದಿಲ್ಲ. ಈ ವಿಷಯದ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ತರುತ್ತೇವೆಂದು ಹೇಳಿದ್ದೀರಿ. ಆ ಮೂಲಕ ತಂದು ಮಾತನಾಡಿ. ಈಗ ಅವಕಾಶ ಕೊಡುವುದಿಲ್ಲ. ನೀವು ಮಾತನಾಡುವುದು ದಾಖಲೆಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಅರ್ಧಗಂಟೆ ಕಾಲವಧಿ ಚರ್ಚೆಗೆ ಕೊಡಿ.

ಈ) ವಿಷಯ: ಕೊಬ್ಬರಿಗೆ ಬೆಂಬಲ ಬೆಲೆಯನ್ನು ಹೆಚ್ಚಿಸುವ ಕುರಿತು.

ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರವು ಕೊಬ್ಬರಿ ಬೆಳೆಗೆ ಐದು ಸಾವಿರ ರೂ.ಗಳ ಬೆಂಬಲ ಬೆಲೆಯನ್ನು ನೀಡಿ ನಫೆಡ್ ಮೂಲಕ ಖರೀದಿಸುವ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮತ್ತು ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೆ, "ಸರ್ಕಾರದ ಆದೇಶ ಸಂಖ್ಯೆ: ಸಇ 132 ಎಂಆರ್ಇ 2010 ದಿನಾಂಕ 15/05/2010 ರಲ್ಲಿ 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೇಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ ರೂ.4,700–00 ಗಳನ್ನು ಘೋಷಿಸಿದ್ದು, ಈ ಬೆಲೆಗಿಂತ ರಾಜ್ಯದ ಮಾರುಕಟ್ಟೆಗಳಲ್ಲಿ ಬೆಲೆ ಕಡಿಮೆಯಾದಲ್ಲಿ ಸದರಿ ಬೆಲೆಯಲ್ಲಿ ರೈತರಿಂದ ಉಂಡೆ ಕೊಬ್ಬರಿಯನ್ನು ಖರೀದಿಸಲು ಆದೇಶ ಹೊರಡಿಸಿದೆ. ನಾಫೇಡ್ ಸಂಸ್ಥೆಯನ್ನು ಖರೀದಿ ಸಂಸ್ಥೆಯನ್ನಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ